

# ದಿಂಬಿನಡಿಯಲ್ಲೊಂದು ಡಿನ್ನೋಸಾರ್

■ ಯಂಡಮೂರಿ ವೀರೇಂದ್ರನಾಥ್

ಕನ್ನಡಕ್ಕೆ: ಸಂಡೂರು ವೆಂಕಟೇಶ್

ಕಲೆ: ಮನೋಹರ್ ಆಚಾರ್ಯ

## ಮಿಜ್ರಾಡಿನ್-ಗಫಾರ್‌ಖಾನ್ ಮಾತುಕತೆ

ಮಾನಸಿಕ ರೋಗಿಗಳು ಕೆಲವು ವಿಷಯಗಳಲ್ಲಿ ಬುದ್ಧಿವಂತರಾಗಿರುತ್ತಾರೆ. ಸ್ವಲ್ಪ ಬ್ರೇನ್ ಹಾಳಾಗಿದ್ದರೂ, ಉಳಿದದ್ದು ಶಾರ್ಪ್ ಆಗಿರುತ್ತದೆ. ಪ್ರೇಮ್ ಆ ಗುಂಪಿಗೆ ಸೇರಿದವನು.

ಅವಳು ಫೋನ್ ಹುಡುಕಿ ಎತ್ತಿಕೊಂಡು, ತನ್ನ ಸಂಭಾಷಣೆ ಡಿಲೀಟ್ ಮಾಡುವ ಸಲುವಾಗಿ ಹುಡುಕುತ್ತಿದ್ದಾಗ, 'ನಿನ್ನ ಚರಿತ್ರೆ ಅದರಲ್ಲಿಲ್ಲ, ಈ ಫೋನ್‌ನಲ್ಲಿದೆ' ಎಂದಿದ್ದು ಬಾಗಿಲ ಬಳಿಯಿಂದ ಕೇಳಿಸಿತು.

ಅವಳು ಬೆಚ್ಚಿ ಆ ಕಡೆ ತಿರುಗಿ ನೋಡಿದಳು. ಪ್ರೇಮ್ ನಗುತ್ತಾ ಒಳಗೆ ಬಂದನು. 'ನಾನು ಫೋನ್ ಮರೆತು ಹೋಗಲಿಲ್ಲ. ಬೇಕೆಂದೇ ಅಲ್ಲಿ ಬಿಟ್ಟಿದ್ದೆ. ಆ ಮೊಬೈಲ್‌ಗೆ ಫೋನ್ ಮಾಡಿದ್ದೂ ನಾನೇ. ಯಾಕೆ ಗೊತ್ತಾ? ನಿನ್ನನ್ನು ಈ ರೂಂಗೆ ಕರೆಸಿಕೊಳ್ಳುವುದಕ್ಕೆ! ನಿಮ್ಮ ಮನೆಗಿಂತ ನಾವಿಬ್ಬರೂ ಇಲ್ಲಿ ಸೇಫ್' ಎಂದನು.

ಅವಳು ಅಪ್ರಯತ್ನವಾಗಿ ಹೆಜ್ಜೆಯನ್ನು ಹಿಂದಕ್ಕೆ ಇಟ್ಟಳು. ಅವನು ಅವಳ ಕಡೆ ನಡೆದು ಬರುತ್ತಾ 'ನಿನ್ನನ್ನು ಬಲವಂತ ಮಾಡುವುದು, ನೀನು ಕೊಸರಿಕೊಳ್ಳುವುದು ಇದೆಲ್ಲ ಏಕೆ ಬೇಕು? ನೀನು ಜಾಣೆ. ಏನು ಮಾಡ್ತೀಯೋ ಯೋಚನೆ ಮಾಡು. ನಿನಗಿರುವುದು ಎರಡೇ ದಾರಿ, ನಪುಂಸಕ ಗಂಡನ ಜೊತೆ ಇರುವುದು, ಇಲ್ಲವೇ ಡಿವೋರ್ಸ್ ತೆಗೆದುಕೊಳ್ಳುವುದು! ಅವನ ಜೊತೆ ಇರಬೇಕು ಅಂದುಕೊಂಡರೆ ಒಂದು ಸಾರಿ ಒಪ್ಪಿಕೋ. ನಾಳೆಯೇ ರೂಂ ಖಾಲಿ ಮಾಡಿ ಹೊರಟು ಹೋಗುತ್ತೇನೆ ಅಥವಾ ಅವನನ್ನು ಬಿಡುವುದೇ